Rd No B G 155 1-3-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಗಡಿ ವಿಷಯದಲ್ಲಿ ಶಾಸನಸಬೆಯ ನಿರ್ಣಯ

ಭಾರತಕ್ಕೆ ಜಪಾನ್ ಸಾಲಾ

ಟೋಕಿಯೊ— ಜಪಾನ್ ಭಾರತಕ್ಕೆ 9158.4 ಮಿಲಿಯ ಯೆನ್ ಸಾಲಾ ನೀಡುವ ಒಪ್ಪಂದನಾಯಿತು

STATEMENT ABOUT OWNERSHIP & OTHER PARTICULARS ABOUT NEWSPAPER

SATYAVADI

FORM IV (See Rule ; 8)

Place of Publication .... Mysore City
Periodicity of its Publication .... Daily
Printer's, Publisher's, Editor's Name M. S. Krishna Rao,
Whether Citizen of India .... Yes
Address 1067 Chamaraja Puram Mysore-4

Names and Addresses of Individuals who own the News Paper Etc., M. S. Krishna Rao

M. S. KRISHNA RAO hereby declare that the Particulars given above are true to the best of my knowledge and belief.

(Sd.) M S. Krishna Rao
Dated : 1 st March '70 Signature of Publisher

ವುಡ್‌ಲ್ಯಾಂಡ್ ಜನಸಂದಣಿಯು 9 ನೇ ಮಾ
ಶಿ ನ ಅಮೋಘ ಪ್ರಾರಂಭ

ಗೆಜ್ಜೆ ಪೂಜೆ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ಅಪೆರಾ— 27 2-70 ರಿಂದ

.... ಮನಮೋಹಕ ತಮಿಳು ಚಿತ್ರ ....

ಇರು ಕೋಡುಗಳ

ಜೆಮಿನಿ ಗಣೇಶ್, ತಾಯ್ ನಾಗೇಶ್ ಮತ್ತು ಸಾಹುಕಾರ್ ಜಾನಕಿ ಅಭಿನಯ

ಫ್ರಾನ್ಸ್ – ಚೀಣಾ

ಹಾಂಕಾಂಗ್— ಫ್ರಾನ್ಸು ಚೀಣಾಕ್ಕೆ ರಹಸ್ಯವಾಗಿ 48 ಸೂಪರ್‌ಸಾನಿಕ್ ಫೈಟರ್ ಬಾಂಬರುಗಳನ್ನು ಮಾರಿದೆಯೆಂದು ವರದಿಯಾಗಿದೆ.

★

ಸರ್ಕಾರಿ ಮುದ್ರಣಾಲಯಗಳು

ಮದರಾಸು— ಪ್ರತಿ ಜಿಲ್ಲೆಯಲ್ಲಿ ಸರಕಾರ ತನ್ನ ಮುದ್ರಣಾಲಯವನ್ನು ಸ್ಥಾಪಿಸಲು ಯೋಜಿಸಿರುವುದಾಗಿ ನಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

★

ಅಕ್ಕಿ ಜೋನಸ್

ನವದೆಹಲಿ— ಅಕ್ಕಿ ಸರಬರಾಜು ಮಾಡುವ ರಾಜ್ಯಗಳಿಗೆ ಬೋನಸ್ ಕೊಡಲು ಬಡ್ಜೆಟ್‌ನಲ್ಲಿ ರೂ 4 ಕೋಟಿ ಇಡಲಾಗಿದೆ.

★

ಒಂದೇ ದಿನದಲ್ಲಿ ಅಪಾರ ಲೆವಿ

ಹುಬ್ಬಳ್ಳಿ— ಒಂದೇದಿವಸದಲ್ಲಿ 2800 ಚೀಲ ಭತ್ತವು ಗಲಗಿ-ಹುಲಿಕಾಂನಲ್ಲಿ ಲೆವಿ ಕೊಡಲಾಯಿತು.

೧

ಸೀಮೆಎಣ್ಣೆ ವಶ

ನಂಜನಗೂಡು— ರೂ 4000 ಬೆಲೆಯ 34 ಬ್ಯಾರಲ್ ಸೀಮೆಎಣ್ಣೆಯನ್ನು ಲೈಸೆನ್ಸಿಲ್ಲದೆ ಮಾರುತ್ತಿದ್ದ ಶ್ರೀ ಸೋಮಣ್ಣ ನೆಂಬಾತನಿಂದ ಪೋಲೀಸರು ವಶಪಡಿಸಿಕೊಂಡರು.

●

ರೈತರ ನೆರವಣಿಗೆ

ಗುಲ್ಬರ್ಗ— ಹುನ್ಗುಂದಾ ತಾಲ್ಲೂಕಿನಲ್ಲಿ ಎಸ್ಸೆಸ್ಪಿ ನಾಯಕರ ನೇತೃತ್ವದಲ್ಲಿ, ಭೂಕಂದಾಯ, ಲೆವಿ ವಿಷಯದಲ್ಲಿ ತಮ್ಮ ಕೇಳಿಕೆ ಒತ್ತಾಯ ಮಾಡಲು ಮೆರವಣಿಗೆ ನಡೆಸಿದರು.

ಶಾಸನ ಸಭೆ ನಿರ್ಣಯ

ಬೆಂಗಳೂರು— ಮಹಾಜನ ಕಮಿಷನ್ ರಿಪೋರ್ಟನ್ನು, ಮೈಸೂರು–ಮಹಾರಾಷ್ಟ್ರ ಗಡಿ ವ್ಯಾಜ್ಯ ಮಾತ್ರವಲ್ಲದೆ ಮೈಸೂರು-ಕೇರಳ ಗಡಿ ವ್ಯಾಜ್ಯ ವಿಷಯದಲ್ಲೂ, ಒಂದು ತೀರ್ಪೆಂದು ಭಾವಿಸಿ, ಜಾರಿಗೆ ತರಬೇಕೆಂಬ ಠರಾವು ನಿನ್ನೆ ಶಾಸನ ಸಭೆಯಲ್ಲಿ ಮಂಜೂರಾಯಿತು.

★

ಗೋಕಾಕ್‌ನಲ್ಲಿ ಗೋಳೀಬಾರ್

ಬೆಳಗಾಂ— ಗೋಕಾಕ್‌ನಲ್ಲಿ ಪೋಲೀಸು ಸ್ಟೇರ್ಷ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದ 4000 ಮಂದಿ ಮೈಸೂರು ಪರ ಚಳವಳಗಾರರ ಮೇಲೆ ಪೋಲೀಸರು ಲಾಠಿ ಚಾರ್ಜು ಮತ್ತು ಗೋಳಿಬಾರು ಮಾಡಿದರು – 3 ಮಂದಿ ಗಾಯಗೊಂಡರು – ಗುಂಪಿನ ಕಲ್ಲು ಎಸೆತದಲ್ಲಿ ಕೆಲವರು ಪೋಲೀಸರು ಗಾಯಗೊಂಡರು.

★

ಕೇಂದ್ರದ ಬಡ್ಜೆಟ್

ನವದೆಹಲಿ— ಇಂದಿರಾ ಗಾಂಧಿಯವರು ಲೋಕಸಭೆಯಲ್ಲಿ ನಿನ್ನೆರಾತ್ರೆ 10 ಗಂಟೆಗೆ ತಮ್ಮ ಪ್ರಥಮ ಬಡ್ಜೆಟ್ ಮಂಡಿಸಿದರು – ರೂ 170 ಕೋಟಿಗಳಷ್ಟು ಹೆಚ್ಚು ತೆರಿಗೆ ವಿಧಿಸಲಾಗಿದೆ– ಸಕ್ಕರೆ, ಟೀ, ಸಿಗರೇಟು, ಸೀಮೆಎಣ್ಣೆ ಮೇಲೂ ಹೆಚ್ಚುತೆ ತೆರಿಗೆ ವಿಧಿಸಲಾಗಿದೆ.

೧

ಸಿಂಹ ಚಿರತೆ ಕಾವಲು

ಲಂಡ್—ದಕ್ಷಿಣಾ ಆಫ್ರಿಕಾ ಕ್ರಿಕೆಟ್ ಟೀಮು ಇಂಗ್ಲೆಂಡಿನಲ್ಲಿ ಪ್ರವಾಸ ಮಾಡುವಾಗ ವರ್ಣದ್ವೇಷಿಗಳ ತೊಂದರೆಯಾದೀತೆಂಬ ಶಂಕೆಯಿಂದ ಕ್ರಿಕೆಟ್ ಆಟದ ಸ್ಥಾನ ರಕ್ಷಣೆಗೆ ಕಾವಲಾಗಿರಲು ಸರ್ಕಸ್ ಸಿಂಹ ಚಿರತೆ ಪಡೆಯಲಿರುವರು – ಹೆಚ್ಚು ನಾಯಿಗಳನ್ನೂ ಇಡಲಾಗುವುದು.

ಆಹಾರಾಂಶಗಳು

ಮೂಲಭೂತವಾಗಿ ಪೋಷಕಾಂಶಗಳ ಅಗತ್ಯಗಳು ವಯಸ್ಸಿಗೆ ತಕ್ಕಂತೆ ಭಿನ್ನವಾಗಿರುವುವು. ಶೈಶವಾವಸ್ಥೆ ಹಾಗೂ ತಾರುಣ್ಯಾವಸ್ಥೆಗಳಲ್ಲಿ ಬೆಳವಣಿಗೆಯ ಅವಧಿಯಲ್ಲಿ ಅವುಗಳ ಅಗತ್ಯ ಹೆಚ್ಚಾಗಿರುವುದು ಮತ್ತು ವಯಸ್ಸಾದಂತೆ ಕಡಿಮೆ ಆಗುವುದರ ಹೊರತು ವೃದ್ಧರ ಹಾಗೂ ಇತರ ವಯಸ್ಕರ ಅಗತ್ಯಗಳ ನಡುವೆ ಅಷ್ಟು ವ್ಯತ್ಯಾಸವಿರುವುದಿಲ್ಲ. ಸಾಮಾನ್ಯವಾಗಿ ಆಹಾರ ಸೇವನೆಯಲ್ಲಿ ವ್ಯವಸ್ಥೆ ಇಲ್ಲದಿರುವಿಕೆ, ಆಹಾರ ಪದ್ಧತಿಗಳಲ್ಲಿ ನ್ಯೂನತೆ, ಸಾಕಷ್ಟು ಆಹಾರವನ್ನು ಕೊಳ್ಳಲು ಹಣದ ಅಭಾವ ಮತ್ತು ಸರಿಯಾದ ತಿಳಿವಳಿಕೆಯಿಲ್ಲದಿರುವುದು ಇಂಥ ಹಲವು ಕಾರಣಗಳು.

ಮಾನವರಲ್ಲಿ ಬಹುತೇಕ ಮಂದಿ ಧಾನ್ಯಗಳನ್ನು—ಮುಖ್ಯವಾಗಿ ಅಕ್ಕಿ ಗೋಧಿ ಸುತ್ತು ಜೋಳಗಳನ್ನು ಅವಲಂಬಿಸಿರುವುದರಿಂದ ಸಮೀಪದ ಭವಿಷ್ಯದಲ್ಲಿ ಇಂಥಹ ಆಹಾರ ಪದಾರ್ಥಗಳ ಉತ್ಪಾದನೆಯನ್ನು ಹೆಚ್ಚಿಸುವುದು ಬಹು ಮುಖ್ಯವಾಗಿದೆ. ಅತ್ಯಗತ್ಯ ಅಮಿನೋ ಆಸಿಡ್‌ಗಳಲ್ಲಿ ಒಂದು ಅಥವಾ ಹೆಚ್ಚು ಥ್ರಿಯೊನೈನ್, ಗೋಧಿಯಲ್ಲಿ ಲೈಸೀನ್ ಮತ್ತು ಜೋಳದಲ್ಲಿ ಲೈಸೀನ್ ಮತ್ತು ಟ್ರೈಪ್ಟೊಫೇನ್ ಇವುಗಳ ಕೊರತೆಯಿಂದಾಗಿ ಈ ಆಹಾರ ಧಾನ್ಯಗಳಲ್ಲಿ ಪ್ರೋಟೀನ್ ಅಂಶ ಕಡಿಮೆ ಆಗಿರುವುದು.

ರಸಾಯನ ಶಾಸ್ತ್ರಜ್ಞರ ಸಹಾಯದಿಂದ, ಗೋಧಿಯಲ್ಲಿ ಇಲ್ಲದಿರುವ ಏಕ ಮಾತ್ರ ಪೋಷಕಾಂಶ ಲೈಸೀನನ್ನು ಸೇರಿಸಿ ಬ್ರೆಡ್ ಅಥವಾ ಇತರ ಭೋಜ್ಯಗಳನ್ನು ತಯಾರಿಸಲು ಸಾಧ್ಯವಾಗುವುದು. ಲೈಸೀನ್ ಸೇರಿಸಿ ತಯಾರಿಸಲಾದ ಗೋಧಿ ಆಹಾರಗಳಲ್ಲಿ ಉತ್ತಮ ದರ್ಜೆಯ ಪ್ರೋಟೀನ್ ಅಂಶವಿರುವುದು.

ಕೃತಕ ಅಮಿನೋ ಆಮ್ಲಗಳು, ಆಹಾರ ಧಾನ್ಯಗಳ ಸೂಕ್ತ ಮಿಶ್ರಣ ಅಥವಾ ಮೀನಿನ ಹಿಟ್ಟಿನಂಥ ಪ್ರೋಟೀನ್ ಸಮುಚ್ಚಯಗಳು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಧಾನ್ಯಗಳ ಆಹಾರ ಅವಲಂಬಿಸಿರುವ ಲಕ್ಷಾಂತರ ಜನರಿಗೆ ತುಂಬ ಪ್ರಯೋಜನಕರವಾಗಿರುವುವು.

ಇದೀಗ

ಮೈಸೂರು ಸರ್ಕಾರದ

ರೇಷ್ಮೆ ನೇಯ್ಗೆ

ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು

ಮನಮೋಹಕ ನಮೂನೆಯ

ವಿಶಿಷ್ಟ ನಯಗಾರಿಕೆಯ

ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.

ಮೈಸೂರು ಗೌರ್ನಮೆಂಟ್

ಸಿಲ್ಕ್ ವೀವಿಂಗ್ ಫ್ಯಾಕ್ಟರಿ

ಮಾನಂದವಾಡಿ ರಸ್ತೆ, ಮೈಸೂರು 4

SHAKTI

SUDHA

A Superb Tonic

ದೇಶದ ಹಿತಕ್ಕಾಗಿ

ಕುಟುಂಬ ಯೋಜನೆ

Help The Gorakshana

Protect the Cow

Quality Printing — Neat Binding

Lakshminarasimha Press

Sivarampet, Mysore

Edited Printed Published by Dharmaprachara Nirata M S Krishna Rao (Proprietor) at the Satyavadi Press Chamarajapet, Mysore